ಅಂತರಂಗವೊಂದು ನಿಗೂಢ. ಅತಿಯಾದ ಪ್ರೀತಿಯೇ ಕೊರಳ ಕುಣಿಕೆಯಾಗುವುದರ ಕುರಿತು ವಿಷಾದ. ಯಾತರಲ್ಲಿ ಕಮ್ಮಿಯಾಗಿತ್ತು ವೈಷ್ಣವಿಗೆ? ವಿದ್ಯೆ, ಬುದ್ಧಿ, ರೂಪಲಾವಣ್ಯಗಳಲ್ಲಿ ಯಾವ ಅರೆಕೊರೆ ಇರಲಿಲ್ಲ. ಲೋಕೋಪಯೋಗಿ ಇಲಾಖೆಯಲ್ಲಿ ಎಂಜಿನಿಯರ್ ಆಗಿದ್ದ ಅಪ್ಪ ಸಾಕುಸಾಕೆನ್ನುವಷ್ಟು ದುಡಿದಿಟ್ಟಿದ್ದರು. ಎಲ್ಲವುಗಳ ವಾರಸುದಾರಿಣಿ ಏಕೈಕ ಪುತ್ರಿ ವೈಷ್ಣವಿ. ಹಿಂದೊಂದು ಕಾಲದಲ್ಲಿ ಊರ ಹೊರವಲಯದಲ್ಲಿ ನಗಣ್ಯವೆನಿಸುವ ದರಕ್ಕೆ ಕೊಂಡುಕೊಂಡ ದೊಡ್ಡ ಜಾಗದಲ್ಲಿ ಕಟ್ಟಿಸಿದ ಬಂಗಲೆಗೆ, ಬಂಗಲೆಯನ್ನು ಲೆಕ್ಕಕ್ಕೆ ಹಿಡಿಯದಿದ್ದರೂ ಈ ಕಾಲದಲ್ಲಿ ಕೋಟಿಗಳ ಲೆಕ್ಕದಲ್ಲಿ ಬೆಲೆ. ಊರ ಹೊರವಲಯದಲ್ಲಿದ್ದ ಜಾಗ ಯಾವತ್ತೋ ಊರ ನಡುಮಧ್ಯಕ್ಕೆ ಸೇರಿಕೊಂಡು ಪ್ರತಿಷ್ಠಿತರ ಬಡಾವಣೆಯಾಗಿಬಿಟ್ಟಿದೆ. ಹರೆಯ ತುಂಬಿ ತುಳುಕುವ ವಿವಾಹಯೋಗ್ಯ ವಯಸ್ಸಿನಲ್ಲಿ ಈ ಮನೆಯ ಸಂಬಂಧ ಬಯಸಿ ಬಂದ ಕುಟುಂಬಗಳಲ್ಲಿ ಯಾವೊಬ್ಬ ಯೋಗ್ಯ ವರನನ್ನಾದರೂ ಮಗಳಿಗಾಗಿ ಆಯ್ಕೆ ಮಾಡಬಹುದಿತ್ತು ರಾಯರು. 'ಇನ್ನೇನು ಹೂಂಗುಟ್ಟುವುದೊಂದು ಬಾಕಿ' ಅನ್ನುವಂತಾ ಸಂಬಂಧಗಳೂ ಕೊನೆಗಳಿಗೆಯಲ್ಲಿ ಯಾವುದೋ ಕಾರಣದಿಂದ, ಕೆಲವೊಮ್ಮೆ ತೀರಾ ಕ್ಷುಲ್ಲಕವೆನಿಸುವ ಕಾರಣದಿಂದಲೂ ಕೂಡಾ, ಮುರಿದು ಬೀಳುತ್ತಿದ್ದುವು. ವರನ ಕಡೆಯವರಿಂದಲ್ಲ, ತಣ್ಣೀರನ್ನೂ ಆರಿಸಿ ಕುಡಿಯುವಷ್ಟು ಮುಂಜಾಗರೂಕತೆ ವಹಿಸುತ್ತಿದ್ದ ರಾಯರ ಕಾರಣದಿಂದಲೇ. ಸಣ್ಣ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡ ಮಗಳನ್ನು ಕಣ್ಣ ಗೊಂಬೆಯಂತೆ ಕಾಪಿಟ್ಟುಕೊಂಡಿದ್ದ ರಾಯರಿಗೆ ಆ ಕಣ್ಮಣಿಗೆ ಕಷ್ಟದ ನೆರಳೂ ಸೋಕಬಾರದೆನ್ನುವ ಕನವರಿಕೆ. ಎಲ್ಲೋ ಒಂದು ಊನ ಕಂಡಿತೆಂದರೆ ನಿರ್ದಾಕ್ಷಿಣ್ಯವಾಗಿ ಆ ಸಂಬಂಧಕ್ಕೆ ವಿದಾಯ. ಭೂತಕನ್ನಡಿಯಲ್ಲಿ ನೋಡುತ್ತಿದ್ದ ಕುಂದುಕೊರತೆಗಳನ್ನು ಪುತ್ರಿಗೂ ಮನವರಿಕೆ ಮಾಡಿಕೊಟ್ಟು 'ಅಹುದಹುದು' ಅನ್ನಿಸಿಬಿಡುತ್ತಿದ್ದರು ರಾಯರು. ಒಬ್ಬಳೇ ಮಗಳಾಗಿ ಹೆತ್ತವರ ಪ್ರೀತಿಯ ಭದ್ರಕೋಟೆಯಲ್ಲಿ ಬಂಧಿಯಾಗಿರುವುದು ವರವೇ? ಶಾಪವೇ? ಮುನ್ನುಗ್ಗಿ ನಿರ್ಧಾರ ತೆಗೆದುಕೊಳ್ಳುವ ಛಾತಿಯನ್ನು ವಾಂಛಲ್ಯ ಕಸಿದುಕೊಂಡುಬಿಡುತ್ತದೆಯೇ? ಕಲ್ಪನೆಯಲ್ಲಿನ ಭೀತಿ ಹಿರಿದಾಗಿ ವಾಸ್ತವಕ್ಕೆ ಕುರುಡಾಗುವಂತೆ ಮಾಡುತ್ತದೆಯೇ?

ವರ್ಷಗಳು ಉರುಳುತ್ತಾ ಉರುಳುತ್ತಾ, ವೈಷ್ಣವಿಯ ವಯಸ್ಸು ಏರುತ್ತಾ ಏರುತ್ತಾ, ಅವಳನ್ನು ಕೇಳಿಕೊಂಡು ಮನೆಗೆ ಎಡತಾಕುತ್ತಿದ್ದವರ ಸಂಖ್ಯೆ ಕಡಿಮೆಯಾಗುತ್ತಾ ಹೋಯ್ತು. ಇದೀಗ ವೈಷ್ಣವಿಯ ವಿವಾಹಕ್ಕೆ ಹೊಸ ತೊಡಕು. 'ಹುಡುಗಿಯ ವಯಸ್ಸು ಜಾಸ್ತಿಯಾಯ್ತು.' ಯಾವ ಹೊಂದಾಣಿಕೆಗೂ ಮನಗೊಡದೆ ಯೋಗ್ಯ ವಯಸ್ಸಲ್ಲಿ ಯೋಗ್ಯ ವರನನ್ನು ಆಯ್ದುಕೊಳ್ಳಲು ಮೀನಮೇಷ ಎಣಿಸಿದ ಕುಟುಂಬಕ್ಕೆ ನಾನಾ ಕಾರಣದಿಂದ ವಯಸ್ಸು ಮೀರಿದ ಯುವಕರು ಹಿತವಾಗಿ ಕಾಣುವುದು ಅಸಾಧ್ಯವಾಯ್ತು. ಮಗಳಿಗಾಗಿ ಮತ್ತೊಂದು ಮದುವೆಯಾಗದೆ ತನ್ನ ಸ್ವಸುಖವನ್ನು ಬಲಿ ಕೊಟ್ಟ ಅಪ್ಪನನ್ನು ತನ್ನ ವಿಧಿಗೆ ಹೊಣೆ ಮಾಡುವ ಧೂರ್ತೆಯಲ್ಲ ವೈಷ್ಣವಿ. ಪರಿಸ್ಥಿತಿಯೊಂದಿಗೆ ರಾಜಿ ಮಾಡಿಕೊಂಡು ಬದುಕಿಗೆ ಹೊಂದಿಕೊಂಡಳು. ಕ್ರಮೇಣ ಅದೇ ಅಭ್ಯಾಸವಾಗುತ್ತಾ, ಆಗುತ್ತಾ, ಅಪ್ಪನಿಗೆ ಮಗಳು ಆಧಾರ. ಮಗಳಿಗೆ ಅಪ್ಪ.

"ಹೀಗಾಯ್ತಲ್ಲ ಕಂದಾ? ನನ್ನ ನಂತರ ನಿನ್ನ ಗತಿ ಏನಾಗುತ್ತೋ?" ಅಪ್ಪ ಕಳವಳಿಸಿದರೆ ಮಗಳ ಸಾಂತ್ವನ, "ಏನಾಗಲ್ಲ ಅಪ್ಪಾ. ಸುಮ್ಮನೆ ಕೊರಗ್ತಾ ಕೂರ್ಬೇಡ. ನಿನ್ನ ಮಗಳು ದಡ್ಡಿಯಲ್ಲ."

ವೈಷ್ಣವಿಗೆ ಇದೀಗ ನಲವತ್ತೈದು ದಾಟಿದೆ. ಈ ವಯಸ್ಸಿನಲ್ಲಿ ಪ್ರೀತಿಯ ಮಾಯಾಲೋಕದ ಬಾಗಿಲು ತೆರೆದುಕೊಂಡು ಅವಳಿಗೆ ಹೊಸ ಜಗತ್ತಿನ ದರ್ಶನ ಮಾಡಿಸುತ್ತಿದೆ. ನೀರಸ ಬದುಕಿನಲ್ಲಿ